All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು

# ರಾಷ್ಟ್ರೀಯ ವಾರ್ತೆಗಳು

09.02.2026 7.35 pm

***************

ಮುಖ್ಯಾಂಶಗಳು

- ಭಾರತದಿಂದ ಸೀಶೆಲ್ ದೇಶಕ್ಕೆ ೧೭೫ ಮಿಲಿಯನ್ ಡಾಲರ್ ವಿಶೇಷ ಆರ್ಥಿಕ ಪ್ಯಾಕೇಜ್ - ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಣೆ
- ಪ್ರತಿಪಕ್ಷಗಳ ಗದ್ದಲ ನಡುವೆ ಲೋಕಸಭಾ ಕಲಾಪ ನಾಳೆಗೆ ಮುಂದೂಡಿಕೆ; ಬಜೆಟ್ ಚರ್ಚೆ ಆರಂಭಿಸಿದ ರಾಜ್ಯಸಭೆ
- ಪ್ರಧಾನಮಂತ್ರಿ ನಗರ ಆವಾಸ್ ಯೋಜನೆಯಡಿ ಫಲಾನುಭವಿಗಳಿಗೆ ೯೦ ಲಕ್ಷಕ್ಕೂ ಅಧಿಕ ಮನೆಗಳ ವಿತರಣೆ - ಸಚಿವ ಮನೋಹರ್ ಲಾಲ್
- ಬಂಡವಾಳ ವೆಚ್ಚ ಕಳೆದ ಒಂದು ದಶಕದಲ್ಲಿ ೧೨ ಲಕ್ಷ ಕೋಟಿ ರೂಪಾಯಿಗೆ ಹೆಚ್ಚಳ- ಸಚಿವ ಹರ್ದೀಪ್ ಸಿಂಗ್ ಪುರಿ
- ಏಷ್ಯನ್ ಶೂಟಿಂಗ್; ೨೫ ಮೀಟರ್ ಪಿಸ್ತೂಲ್ ಮಹಿಳಾ ತಂಡಸ್ಪರ್ಧೆಯಲ್ಲಿ ಭಾರತಕ್ಕೆ ಚಿನ್ನ

***************

ಪ್ರಧಾನಿ ನರೇಂದ್ರ ಮೋದಿ ಸೀಶೆಲ್ ದೇಶಕ್ಕಾಗಿ ೧೭೫ ಮಿಲಿಯನ್ ಡಾಲರ್ ವಿಶೇಷ ಆರ್ಥಿಕ ಪ್ಯಾಕೇಜ್ ಪ್ರಕಟಿಸಿದ್ದಾರೆ.

ನವದೆಹಲಿಯಲ್ಲಿಂದು ಸೀಶೆಲ್ ಅಧ್ಯಕ್ಷ ಡಾ.ಪೆಟ್ರಿಕ್ ಹರ್ಮಿನಿ ಜೊತೆಗೂಡಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಈ ವಿಶೇಷ ಪ್ಯಾಕೇಜ್ ಸಾಮಾಜಿಕ ವಸತಿ, ಇ-ಮೊಬಿಲಿಟಿ, ವೃತ್ತಿಪರ ತರಬೇತಿ, ಆರೋಗ್ಯ, ರಕ್ಷಣೆ ಹಾಗೂ ಸಮುದ್ರಯಾನ ಭದ್ರತೆಗಳಿಗೆ ಬೆಂಬಲ ನೀಡಲಿದೆ ಎಂದರು.

ಭಾರತ ಹಾಗೂ ಸೀಶೆಲ್ ಆರೋಗ್ಯ, ಹವಾಮಾನ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಉತ್ತಮ ಆಡಳಿತಕ್ಕೆ ಸಂಬಂಧಿಸಿದ ಒಟ್ಟು ೭ ತಿಳಿವಳಿಕೆ ಪತ್ರಗಳಿಗೆ ಭಾರತ-ಸೀಶೆಲ್‌ಗೆ ಸಹಿ ಹಾಕಿವೆ.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತ ಮತ್ತು ಸೀಶೆಲ್‌ಗಳು ಭೌಗೋಳಿಕವಾಗಿ ಮಾತ್ರವಲ್ಲದೇ, ಐತಿಹಾಸಿಕವಾಗಿ ಜನರ ಪರಸ್ಪರ ವಿಶ್ವಾಸ ಹಾಗೂ ಭವಿಷ್ಯದ ದೂರದೃಷ್ಟಿಯಿಂದ ಸಂಪರ್ಕಿತವಾಗಿದೆ. ಸೀಶೆಲ್, ಸಮುದ್ರ ಸಂಬಂಧದಲ್ಲಿ ನಂಬಿಕಸ್ತ ದೇಶವಾಗಿದ್ದು, ಭದ್ರತೆ ಮತ್ತು ಪ್ರಾದೇಶಿಕ ಬೆಳವಣಿಗೆಗಾಗಿ ಪರಸ್ಪರ ಮತ್ತು ಸಮಗ್ರ ಮುಂದುವರಿಕೆ ದೂರದೃಷ್ಟಿ-ಮಹಾಸಾಗರ ವಿಚಾರದಲ್ಲಿ ಸೀಶೆಲ್‌ಗೆ ವಿಶೇಷ ಸ್ಥಾನವಿದೆ ಎಂದು ಹೇಳಿದರು.

ಸೀಶೆಲ್ ಅಧ್ಯಕ್ಷ ಡಾ.ಪೆಟ್ರಿಕ್ ಹರ್ಮಿನಿ ಮಾತನಾಡಿ, ತಮ್ಮ ಭೇಟಿ ಉಭಯ ದೇಶಗಳ ನಡುವಿನ ದೀರ್ಘಾವಧಿಯ ಸ್ನೇಹ ಮತ್ತು ಪರಸ್ಪರ ಗೌರವದ ಸಂಕೇತವಾಗಿದೆ ಎಂದರು. ಹಿಂದೂಮಹಾಸಾಗರದ ದೇಶವಾಗಿ ಕಡಲ ಭದ್ರತೆ ಮತ್ತು ಪ್ರಾದೇಶಿಕ ಸ್ಥಿರತೆ ಪರಸ್ಪರ ಸಂಬಂಧದ ಕೇಂದ್ರೀಯ ವಿಚಾರವಾಗಿ ಮುಂದುವರೆಯುತ್ತದೆ ಎಂದರು.

ಭಾರತ-ಸೆಶೆಲ್ ದೇಶಗಳ ರಾಜತಾಂತ್ರಿಕ ಸಂಬಂಧದ ೫೦ನೇ ವರ್ಷಾಚರಣೆಯ ಸಂದರ್ಭದಲ್ಲಿ ಅಧ್ಯಕ್ಷರ ಈ ಭೇಟಿ ವಿಶೇಷವೆನಿಸಿದೆ.

***************

ಪ್ರತಿಪಕ್ಷಗಳು ನಡೆಸಿದ ಗದ್ದಲ ನಡುವೆ ಲೋಕಸಭೆಯ ಕಲಾಪಗಳನ್ನು ನಾಳೆಗೆ ಮುಂದೂಡಲಾಗಿದೆ.

ಇಂದು ಬೆಳಗ್ಗೆ ಸದನ ಸಮಾವೇಶಗೊಳ್ಳುತ್ತಿದ್ದಂತೆ ಸಭಾಧ್ಯಕ್ಷ ಓಂ ಬಿರ್ಲಾ, ವಿಶ್ವಕಪ್ ಕ್ರಿಕೆಟ್ ಗೆದ್ದ ೧೯ ವರ್ಷದೊಳಗಿನ ತಂಡವನ್ನು ಅಭಿನಂದಿಸಿದ ನಂತರ ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಳ್ಳಲು ಯತ್ನಿಸಿದರು. ವಿರೋಧ ಪಕ್ಷದ ಸದಸ್ಯರು ಸಭಾಧ್ಯಕ್ಷರ ಮುಂಭಾಗದಲ್ಲಿ ಸೇರಿ ಘೋಷಣೆ ಹಾಕ ತೊಡಗಿದರು. ಸದನದ ಕಲಾಪವನ್ನು ನಡೆಸಲು ಅವಕಾಶ ಕಲ್ಪಿಸುವಂತೆ ಬಿರ್ಲಾ ಪದೇ ಪದೇ ಮನವಿ ಮಾಡಿದರು. ಸದನದ ಘನತೆ-ಗೌರವವನ್ನು ಕಾಪಾಡಬೇಕು ಹಾಗೂ ಪ್ರಶ್ನೋತ್ತರ ವೇಳೆಯಲ್ಲಿ ಇತರ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆ ಮುಂದುವರೆದಾಗ ಸದನವನ್ನು ೧೨ ಗಂಟೆಗೆ ಮುಂದೂಡಲಾಯಿತು. ನಂತರ ಸದನ ಸಮಾವೇಶಗೊಂಡಾಗ ಸಚಿವರುಗಳು ತಮ್ಮ ಖಾತೆಗಳಿಗೆ ಸಂಬಂಧಿಸಿದ ಪತ್ರಗಳನ್ನು ಸಾದರಪಡಿಸಿದರು.

ನಂತರ ಪೀಠಾಸೀನಾಧಿಕಾರಿಗಳು ೨೦೨೬-೨೭ರ ಬಜೆಟ್ ಮೇಲಿನ ಸಾಮಾನ್ಯ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿ ಕಲಾಪಕ್ಕೆ ಅಡ್ಡಿಪಡಿಸಿದರು.

ಚರ್ಚೆಯಲ್ಲಿ ಪಾಲ್ಗೊಳ್ಳಲು ಕರೆದಾಗ ಕಾಂಗ್ರೆಸ್ ಸಂಸದ ಶಶಿತರೂರ್ ವಿರೋಧ ಪಕ್ಷದ ನಾಯಕರು ಮಾತನಾಡಲು ಬಯಸಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಬಜೆಟ್ ಮೇಲೆ ಮಾತನಾಡುವುದಾದರೆ ಮಾತ್ರ ಅವಕಾಶ ಕಲ್ಪಿಸುವುದಾಗಿ ಪೀಠಾಸೀನಾ ಅಧಿಕಾರಿಗಳು ತಿಳಿಸಿದರು.

ಗದ್ದಲದ ನಡುವೆ ಚರ್ಚೆ ಅಸಾಧ್ಯವಾದಾಗ ಕಲಾಪವನ್ನು ೨ ಗಂಟೆಗೆ ಮುಂದೂಡಲಾಯಿತು. ಎರಡು ಬಾರಿ ಮುಂದೂಡಿಕೆ ನಂತರ ಸದನ ೨ ಗಂಟೆಗೆ ಸಮಾವೇಶಗೊಂಡಾಗ ವಿರೋಧ ಪಕ್ಷದ ನಾಯಕರಿಂದ ಯಾವುದೇ ಸೂಚನೆ ಬಂದಿಲ್ಲ ಎಂದು ಪೀಠಾಸೀನಾಧಿಕಾರಿ ಸಂಧ್ಯಾ ರೇ ತಿಳಿಸಿದರು.

ಬಜೆಟ್ ಚರ್ಚೆಗೆ ಮುನ್ನ ಮಾತನಾಡಲು ಅವಕಾಶ ಕಲ್ಪಿಸುವುದಾಗಿ ಹಿರಿಯ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಸಭಾಧ್ಯಕ್ಷರು ಭರವಸೆ ನೀಡಿದರೂ ಕೂಡ ಈಗ ಮಾತನಾಡಲು ಕೊಡುತ್ತಿಲ್ಲ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಪಾದಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರೋಧ ಪಕ್ಷದ ನಾಯಕರ ಆಪಾದನೆಯನ್ನು ಅಲ್ಲಗೆಳೆದು, ಸಭಾಧ್ಯಕ್ಷರು ಇಂತಹ ಭರವಸೆಯನ್ನು ಕೊಟ್ಟಿಲ್ಲ ಎಂದರು.

ವಿರೋಧ ಪಕ್ಷಗಳು ಸದನದ ಘನತೆ-ಗೌರವ ಕುಂದಿಸುವ ಯಾವುದೇ ಚಟುವಟಿಕೆ ಮಾಡಬಾರದೆಂದು ಕೋರಿದರು.

ಸಭಾಧ್ಯಕ್ಷರು ಪದೇ ಪದೇ ಮನವಿ ನಡೆದರೂ ಕೇಂದ್ರ ಬಜೆಟ್ ಕುರಿತ ಚರ್ಚೆ ಕೈಗೊಳ್ಳಲಾಗಲಿಲ್ಲ. ಕೋಲಾಹಲದ ನಡುವೆ ಸದನದ ಕಲಾಪವನ್ನು ನಾಳೆ ಬೆಳಗ್ಗೆ ಮುಂದೂಡಲಾಯಿತು.

***************

ರಾಜ್ಯಸಭೆ ೨೦೨೬-೨೭ನೇ ಸಾಲಿನ ಕೇಂದ್ರ ಬಜೆಟ್ ಕುರಿತಾದ ಚರ್ಚೆಯನ್ನು ಕೈಗೆತ್ತಿಕೊಂಡಿತು. ಚರ್ಚೆ ಆರಂಭಿಸಿದ ಕಾಂಗ್ರೆಸ್ ಸಂಸದ ಪಿ.ಚಿದಂಬರಂ, ಭಾರತದ ಆರ್ಥಿಕತೆ ಬೆಳವಣಿಗೆ ದರದ ಬಗ್ಗೆ ಪ್ರಶ್ನಿಸಿದರು.

೨೦೨೫-೨೬ರಲ್ಲಿ ಆರ್ಥಿಕ ಕೊರತೆ ಶೇಕಡ ೪.೪ರಷ್ಟಿದ್ದು, ಮುಂದಿನ ವರ್ಷ ಅದು ಶೇಕಡ ೪.೩ಕ್ಕೆ ಇಳಿಯಲಿದೆ. ಶೇಕಡ ೧.೫ರಷ್ಟಿರುವ ಆದಾಯ ಕೊರತೆ ಮುಂದಿನ ವರ್ಷ ಕೂಡ ಅಷ್ಟೇ ಇರಲಿದೆ. ಆದಾಯ ಕೊರತೆಯನ್ನು ನೀಗಿಸಲು ಒತ್ತು ನೀಡಬೇಕು, ಕನಿಷ್ಠ ಅದು ಶೇಕಡ ೧ರ ಪ್ರಮಾಣವನ್ನು ಮೀರದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

೧೪೪ ಕೋಟಿ ಜನರಿಂದ ೧೯೫ ಲಕ್ಷ ಮಂದಿ ಮಾತ್ರ ಕಾರ್ಖಾನೆಗಳಲ್ಲಿ ಉದ್ಯೋಗ ಪಡೆದಿದ್ದಾರೆ. ತಯಾರಿಕಾ ವಲಯದ ಕಳೆದ ಕೆಲವು ವರ್ಷಗಳಲ್ಲಿ ಶೇಕಡ ೧೬೦ ಬೆಳವಣಿಗೆ ದರದಲ್ಲೇ ಮುಂದುವರೆದಿದೆ ಎಂದು ಹೇಳಿದರು. ವಿಜ್ಞಾನ, ಸಮಾಜ ಕಲ್ಯಾಣ ಮತ್ತು ನಗರ ವಲಯಕ್ಕೆ ಬಜೆಟ್ ಹಣ ನಿಗದಿ ಕಡಿಮೆಯಾಗಿದೆ ಎಂದು ಚಿದಂಬರಂ ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿಯ ಎಂ.ಪಿ ಅರುಣ್ ಸಿಂಗ್ ಮಾತನಾಡಿ, ಬಜೆಟ್ ಗಾತ್ರ ೫೩ ಲಕ್ಷ ಕೋಟಿ ರೂಪಾಯಿ ತಲುಪಿದೆ. ಯುಪಿಎ ಆಡಳಿತಾವಧಿಯಲ್ಲಿ ಇದು ಸುಮಾರು ೧೬ ಲಕ್ಷ ಕೋಟಿ ಇತ್ತು ಎಂದು ಹೇಳಿದರು. ಬಡಜನರಿಗೆ ವಸತಿ ಒದಗಿಸಲು ಬಜೆಟ್‌ನಲ್ಲಿ ಹಣ ಒದಗಿಸಲಾಗಿದೆ. ಕಳೆದ ವರ್ಷದ ಮನ್ರೇಗಾ ಯೋಜನೆಗೆ ನೀಡಲಾಗಿದ್ದ ಹಣಕಾಸನ್ನು ವಿಕಸಿತ ಭಾರತ ಜಿ ರಾಮ್ ಜಿ ಯೋಜನೆಗೆ ಶೇಕಡ ೨೨ರಷ್ಟು ಹೆಚ್ಚಿಸಲಾಗಿದೆ ಎಂದು ಹೇಳಿದರು. ನಾಮನಿರ್ದೇಶಿತ ಸದಸ್ಯೆ ಸುಧಾಮೂರ್ತಿ ಮಾತನಾಡಿ, ಕಳೆದ  ೧೦-೧೨ ವರ್ಷಗಳಲ್ಲಿ ದೇಶದಲ್ಲಿ ಅಪಾರ ಬದಲಾವಣೆ ಉಂಟಾಗಿದ್ದು, ವಿಶ್ವದಾದ್ಯಂತ ಇದು ಅನುಭವಕ್ಕೆ ಬಂದಿದೆ. ಸ್ಥಿರ ಸರ್ಕಾರ, ಸ್ಥಿರ ಹಣಕಾಸು ವ್ಯವಸ್ಥೆ ದಿಟ್ಟ ಬಜೆಟ್ ಮತ್ತು ನಾಯಕತ್ವ ಈ ಬದಲಾವಣೆಯನ್ನು ತಂದಿವೆ ಎಂದು ಹೇಳಿದರು.

***************

ನಕ್ಸಲ್ ಚಟುವಟಿಕೆಯಲ್ಲಿ ತೊಡಗಿರುವವರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಸಮಾಜದ ಮುಖ್ಯವಾಹಿನಿಗೆ ಹಿಂತಿರುಗಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮನವಿ ಮಾಡಿದ್ದಾರೆ.

ಸರ್ಕಾರ ಸಂಪೂರ್ಣ ಗೌರವದೊಂದಿಗೆ ಪುನರ್ವಸತಿಗಳನ್ನು ಖಚಿತಪಡಿಸುವುದೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಛತ್ತೀಸ್‌ಗಢದ ಜಗದಾಲ್‌ಪುರದಲ್ಲಿರುವ ಭಸ್ತಾರ್ ವಿಭಾಗೀಯ ಮುಖ್ಯ ಕಚೇರಿಯಲ್ಲಿಂದು ಭಸ್ತಾರ್ ಪಂಡುಮ್ ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಶಸ್ತ್ರಾಸ್ತ್ರ ಹೋರಾಟ ಮುಂದುವರಿಸುವವರಿಗೆ ಶಸ್ತ್ರದಿಂದಲೇ ಉತ್ತರ ನೀಡಲಾಗುವುದು. ಬುಡಕಟ್ಟು ಸಮುದಾಯದ ಭದ್ರತೆ ಖಾತರಿಪಡಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದರು.

***************

ಸಮಗ್ರ ಆರ್ಥಿಕ ಚಟುವಟಿಕೆಯ ಸೂಚಕವಾದ ದೇಶದ ಬಂಡವಾಳ ವೆಚ್ಚ ೨೦೧೪ರ ನಂತರ ಅನೇಕ ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಅವರು ರಾಜ್ಯಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿ, ೨೦೧೪ರಲ್ಲಿ ಬಂಡವಾಳ ವೆಚ್ಚ ೨ ಲಕ್ಷ ಕೋಟಿ ರೂಪಾಯಿ ಇತ್ತು. ೨೦೨೬-೨೭ರಲ್ಲಿ ಅದು ೧೨ ಲಕ್ಷ ಕೋಟಿ ರೂಪಾಯಿ ಮೀರಿದೆ ಎಂದರು.

ಈ ಬಂಡವಾಳ ವೆಚ್ಚದೊಂದಿಗೆ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳಲು ಹಣಕಾಸು ಆಯೋಗ ರಾಜ್ಯಗಳಿಗೆ ಹೆಚ್ಚುವರಿಯಾಗಿ ೪ ಪಾಯಿಂಟ್ ೪ ಲಕ್ಷ ಕೋಟಿ ರೂಪಾಯಿ ನಿಗದಿಪಡಿಸಿದೆ ಎಂದರು.

ಕಲ್ಲಿದ್ದಲು ಕ್ಷೇತ್ರದಲ್ಲಿ ಬಂಡವಾಳ ವೆಚ್ಚ, ಪ್ರಮುಖವಾಗಿ ೨೦೨೧-೨೨ರ ೧೭ ಸಾವಿರ ಕೋಟಿ ರೂಪಾಯಿಯಿಂದ ೨೦೨೪-೨೫ರಲ್ಲಿ ೩೧ ಸಾವಿರ ಕೋಟಿ ರೂಪಾಯಿಗೆ ಏರಿದೆ. ದೇಶ, ೨೦೨೪-೨೫ನೇ ಹಣಕಾಸು ವರ್ಷದಲ್ಲಿ ೧ ಸಾವಿರದ ೪೭೫ ಪಾಯಿಂಟ್ ೨ ಲಕ್ಷ ಟನ್ ದಾಖಲೆ ಪ್ರಮಾಣದ ಕಲ್ಲಿದ್ದಲು ಉತ್ಪಾದಿಸಿದೆ. ಇದರಿಂದಾಗಿ ಕಲ್ಲಿದ್ದಲು ಆಮದು ಪ್ರಮಾಣ ಕಡಿಮೆಯಾಗಿದೆ ಎಂದು ಹರ್ದೀಪ್ ಸಿಂಗ್ ಪುರಿ ತಿಳಿಸಿದರು.

***************

ಪ್ರಧಾನಮಂತ್ರಿ ನಗರ ಆವಾಸ್ ಯೋಜನೆಯಡಿ ೯೦ ಲಕ್ಷಕ್ಕೂ ಅಧಿಕ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ. ವಸತಿ ಮತ್ತು ನಗರ ವ್ಯವಹಾರ ಖಾತೆ ಸಚಿವ ಮನೋಹರ್ ಲಾಲ್ ಲೋಕಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ನೀಡಿದ ಉತ್ತರದಲ್ಲಿ ಈ ವಿಷಯ ತಿಳಿಸಿದ್ದಾರೆ.

೨೦೧೫ರಲ್ಲಿ ಆರಂಭಿಸಲಾದ ಈ ಯೋಜನೆಯಡಿ ಒಟ್ಟು ೧ ಕೋಟಿ ೧೨ ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ. ವಲಸೆ ಬರುವ ಕಾರ್ಮಿಕರಿಗಾಗಿ ಪ್ರಧಾನಮಂತ್ರಿ ನಗರ ಆವಾಸ್ ಯೋಜನೆ ೨.೦ ಅಡಿ ಕೈಗೆಟಕುವ ದರದಲ್ಲಿ ಬಾಡಿಗೆ ವಸತಿ ಸೌಲಭ್ಯವನ್ನು ಪರಿಚಯಿಸಲಾಗಿದೆ ಎಂದು ಅವರು ಹೇಳಿದರು.

***************

ನವದೆಹಲಿಯಲ್ಲಿ ಇಂದು ನಡೆದ ಏಷ್ಯನ್ ಶೂಟಿಂಗ್ ರೈಫಲ್ ಪಿಸ್ತೂಲ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ ೨೫ ಮೀಟರ್ ಪಿಸ್ತೂಲ್ ತಂಡಸ್ಪರ್ಧೆಯಲ್ಲಿ ಭಾರತದ ಇಶಾ ಸಿಂಗ್, ಮನು ಭಾಕರ್ ಮತ್ತು ರಿದಮ್ ಸಾಂಗ್ವಾನ್ ಚಿನ್ನದ ಪದಕ ಗೆದ್ದರು.

ಭಾರತೀಯ ತಂಡ ಒಟ್ಟು ೧ ಸಾವಿರದ ೭೫೧ ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಚೈನೀಸ್ ತೈಪೆ ೧ ಸಾವಿರದ ೭೩೫ ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರೆ, ವಿಯೆಟ್ನಾಂ ೧ ಸಾವಿರದ ೭೨೯ ಅಂಕಗಳೊಂದಿಗೆ ಕಂಚಿನ ಪದಕ ಗೆದ್ದಿತು.

ಏತನ್ಮಧ್ಯೆ, ಮಹಿಳೆಯರ ೨೫ ಮೀಟರ್ ಪಿಸ್ತೂಲ್ ವೈಯಕ್ತಿಕ ಸ್ಪರ್ಧೆಯಲ್ಲಿ, ವಿಯೆಟ್ನಾಂನ ಥುಯ್ ಟ್ರಾಂಗ್ ನ್ಗುಯೆನ್ ವಿರುದ್ಧದ ಶೂಟ್-ಆಫ್ ಟೈ-ಬ್ರೇಕ್‌ನಲ್ಲಿ ಮನು ಭಾಕರ್ ಚಿನ್ನದ ಪದಕವನ್ನು ಗೆದ್ದರು, ಇಶಾ ಸಿಂಗ್ ೩೦ ಅಂಕಗಳೊಂದಿಗೆ ಕಂಚಿನ ಪದಕವನ್ನು ಗಳಿಸುವ ಮೂಲಕ ಭಾರತದ ಖಾತೆಗೆ ಸೇರ್ಪಡೆಯಾದರು.

***************

ಕೊಲಂಬೋದ ಸಿನ್ಹಳೀಸ್ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಇಂದಿನ ಎರಡನೇ ಪಂದ್ಯದಲ್ಲಿ ಓಮನ್ ವಿರುದ್ಧ ಜಿಂಬಾಬ್ವೆ ೮ ವಿಕೆಟ್‌ಗಳ ಜಯ ಗಳಿಸಿದೆ.

ಅಹಮಾದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದಿರುವ ಇಂದಿನ ಮೂರನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟಾಸ್ ಗೆದ್ದಿರುವ ಕೆನಡಾ ಫೀಲ್ಡಿಂಗ್ ಆಯ್ದುಕೊಂಡಿದೆ.

ಇತ್ತೀಚಿನ ವರದಿ ಬಂದಾಗ ದಕ್ಷಿಣ ಆಫ್ರಿಕಾ ೬.೫ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೭೦ ರನ್ ಗಳಿಸಿ ಆಡುತ್ತಿದೆ.

***************

ಭದ್ರತಾ ವಲಯದ ಹೆಚ್ಚಿದ ಬಜೆಟ್‌ನಿಂದಾಗಿ ದೇಶದ ಸೇನಾಪಡೆಗಳು ಸದಾ ಸನ್ನದ್ಧವಾಗಿರಲು ಸಹಕಾರಿಯಾಗುವುದಲ್ಲದೆ, ರಕ್ಷಣಾವಲಯದ ಆಮದಿನ ಮೇಲಿನ ಅವಲಂಬನೆ ಇಳಿಕೆ, ಕಾರ್ಯತಂತ್ರ ಮತ್ತು ಪೂರೈಕೆಯ ಸರಪಳಿ ಉತ್ತಮವಾಗುತ್ತದೆ ಎಂದು ರಕ್ಷಣಾ ವಲಯದ ಸೇವೆಗಳ ಆರ್ಥಿಕ ಸಲಹೆಗಾರ ರಾಜ್ ಕುಮಾರ್ ಆರೋರ ಹೇಳಿದ್ದಾರೆ.

ಆಕಾಶವಾಣಿಯೊಂದಿಗೆ ಮಾತನಾಡಿದ ಆರೋರ, ರಕ್ಷಣಾ ವಲಯಕ್ಕೆ ಹಂಚಿಕೆಯಾಗಿರುವ ಆಯವ್ಯಯದಿಂದ ಸಾಮರ್ಥ್ಯ ಮತ್ತು ಪೂರೈಕೆ ಬಲಗೊಳ್ಳಲಿದೆ ಎಂದರು. ಜೊತೆಗೆ, ಶಸ್ತ್ರಾಸ್ತ್ರ, ಯುದ್ಧಸಾಮಗ್ರಿ, ಮತ್ತು ಟ್ಯಾಂಕ್‌ಗಳ ಲಭ್ಯತೆಯೂ ಹೆಚ್ಚಾಗುತ್ತದೆ. ೨೦೨೬-೨೭ರ ಆಯವ್ಯಯದಲ್ಲಿ ರಕ್ಷಣಾವಲಯಕ್ಕೆ ೭ ಲಕ್ಷ ೮೫ ಸಾವಿರ ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.೧೬ರಷ್ಟು ಹೆಚ್ಚು ಎಂದರು.

*******ಮುಕ್ತಾಯ********